# ರೈತರ ಹೊಲಕ್ಕೆ ತಲುಪಲಿ ಸಂಶೋಧನೆ

## ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಪ್ರಕಾಶ ಕಮ್ಮರಡಿ ಸಲಹೆ

■ ವಿಜಯವಾಣಿ ಸುದ್ದಿಜಾಲ ರಾಯಚೂರು

ಸರ್ಕಾರ ಹಾಗೂ ರೈತರ ಮಧ್ಯೆ ಸಮನ್ವಯತೆ ಬೆಸೆಯಲು ಆಯೋಗ ನಿರಂತರವಾಗಿ ಪ್ರಯತ್ನಿಸಿದ ಫಲವಾಗಿ ಈ ವರ್ಷ ಬಜೆಟ್‌ನಲ್ಲಿ ಕೃಷಿಗೆ ಕೊಂಚ ಮಟ್ಟಿಗೆ ಬಲ ಸಿಕ್ಕಂತಾಗಿದೆ ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ ಕಮ್ಮರಡಿ ಹೇಳಿದರು.

ನಗರದ ಕೃಷಿ ವಿಜ್ಞಾನಗಳ ವಿವಿಯ ವಿಚಾರ ಸಂಕಿರಣ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಘಟಕಗಳ ರಾಜ್ಯಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ಸಿಎಂ ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರ ಆಯೋಗ ನೀಡಿದ 408 ಪುಟಗಳ ವರದಿಯಲ್ಲಿನ ಕೆಲ ಶಿಫಾರಸುಗಳನ್ನು ಬಜೆಟ್‌ನಲ್ಲಿ ಅಳವಡಿಸಿದೆ. ಆವರ್ತನಿಧಿಗೆ 515 ಕೋಟಿ ರೂ., ಬೆಲೆ ಕೊರತೆ ಪಾವತಿ ಯೋಜನೆಗೆ 50 ಕೋಟಿ ರೂ. ನೀಡಲಾಗಿದೆ. ಇದು ಆಲೂಗಡ್ಡೆ, ಈರುಳ್ಳಿ, ಟೊಮಾಟೊಗೆ ನೆರವಾಗಲಿದೆ ಎಂದರು. ವಿಶ್ವವಿದ್ಯಾಲಯಗಳು, ವಿಜ್ಞಾನಿಗಳು ಮಂಡಿಸಿದ ಕೃಷಿ ಸಂಬಂಧಿತ ಸಂಶೋಧನೆಗಳು ವರದಿ ಮಂಡನೆಗೆ ಸೀಮಿತವಾಗಬಾರದು. ವಿವಿ ವ್ಯಾಪ್ತಿಯಿಂದ ಅನ್ನದಾತರ ಅಂಗಳಕ್ಕೆ ತಲುಪಿಸುವ ಮಹತ್ವದ ಜವಾಬ್ದಾರಿ ಆಯೋಗ ಮತ್ತು ಆಯೋಗದಿಂದ ಸ್ಥಾಪಿತ ವಿವಿಗಳಲ್ಲಿನ ಸಲಹಾ ಸಮಿತಿಯ ಮೇಲಿದೆ ಎಂದು ಹೇಳಿದರು.

» ಉತ್ಪಾದನಾ ವೆಚ್ಚ, ಮಾರುಕಟ್ಟೆ ಘಟಕಗಳ ರಾಜ್ಯಮಟ್ಟದ ಕಾರ್ಯಾಗಾರ

ಕೃಷಿ ವಿವಿ ಕುಲಪತಿ ಡಾ. ಕೆ.ಎನ್.ಕಟ್ಟಿಮನಿ ಮಾತನಾಡಿ, ಇಂದು ಕೃಷಿ ಬದಲಾವಣೆಯಾಗಿದೆ. ರೈತರು ಮಾರುಕಟ್ಟೆಯ ಜಾಣತನ ಪ್ರದರ್ಶಿಸುವ ಅನಿವಾರ್ಯತೆ ಇದೆ. ಯಾವ ಕಾಲಕ್ಕೆ ಯಾವ ಉತ್ಪನ್ನಕ್ಕೆ ಬೇಡಿಕೆ ಇದೆ ಎನ್ನುವುದನ್ನು ಅರಿತವರು, ನೀರಿನ ಬಳಕೆಗೆ ಬಗ್ಗೆ ಜ್ಞಾನ ಇದ್ದವರು ಮಾತ್ರ ಕೃಷಿಯಲ್ಲಿ ಬದುಕು ಕಟ್ಟಿಕೊಳ್ಳಲಿದ್ದಾರೆ. ಸಮಗ್ರ ಬೇಸಾಯಕ್ಕೆ ಒತ್ತು ನೀಡದಿದ್ದರೆ ರೈತನ ಬದುಕು ಹಸನಾಗುವುದು ಕಷ್ಟ. ರೈತರು ಕೃಷಿ ವಿವಿಗೆ ಬಂದು ವಿಜ್ಞಾನಿಗಳನ್ನು ಭೇಟಿ ಮಾಡಿ ಸುಧಾರಿತ ಕೃಷಿಯತ್ತ ಹೆಜ್ಜೆ ಹಾಕುವ ಮನಸು ಮಾಡಿದರೆ ಆರ್ಥಿಕವಾಗಿ ಸಬಲರಾಗಬಹುದು ಎಂದರು. ನಂತರ ವಿವಿಧ ತಾಂತ್ರಿಕ ಮಾಹಿತಿ ಕುರಿತು ಉಪನ್ಯಾಸ, ಸಂವಾದ, ಅಭಿಪ್ರಾಯ ಮಂಡನೆ ನಡೆಯಿತು.

ವಿವಿಯ ವಿಸ್ತರಣಾ ನಿರ್ದೇಶಕ ಡಾ.ಬಿ.ಎಂ.ಚಿತ್ತಾಪುರ, ಡೀನ್ ಡಾ.ಡಿ.ಎಂ. ಚಂದರಗಿ, ಕೃಷಿ ಇಲಾಖೆ ಜಂಟಿ ನಿರ್ದೇಶಕಿ ಡಾ. ಚೇತನಾ ಪಾಟೀಲ್, ಆಯೋಗ ಸ್ಥಾಪಿತ ಸಿಒಸಿ ವಿಭಾಗದ ಅಧ್ಯಕ್ಷ ಡಾ.ಬಿ.ಕೆ.ದೇಸಾಯಿ, ಅಮೃತಾ ಜೋಶಿ ಹಾಗೂ ಸಲಹಾ ಸಮಿತಿ ಸದಸ್ಯರು, ರೈತರು, ಉತ್ಪಾದಕರು ಇತರರಿದ್ದರು.



ರಾಯಚೂರಿನ ಕೃಷಿ ವಿಜ್ಞಾನಗಳ ವಿವಿಯ ವಿಚಾರ ಸಂಕಿರಣ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಕಾರ್ಯಾಗಾರವನ್ನು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ ಕಮ್ಮರಡಿ ಉದ್ಘಾಟಿಸಿದರು. ಡಾ.ಬಿ.ಎಂ.ಚಿತ್ತಾಪುರ ಸೇರಿ ಇತರರಿದ್ದರು.



ರಾಯಚೂರಿನ ಕೃಷಿ ವಿಜ್ಞಾನಗಳ ವಿವಿಯ ವಿಚಾರ ಸಂಕಿರಣ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಕಾರ್ಯಾಗಾರದಲ್ಲಿ ಉತ್ಪಾದಕರು, ತಜ್ಞರು ಪಾಲ್ಗೊಂಡಿದ್ದರು.

ಸಿರಿಧಾನ್ಯಗಳ ಮೇಳ ನಡೆಸುವುದರಿಂದ ರೈತರಿಗೆ ಲಾಭ ಆಗದು ಎನ್ನುವ ಅಭಿಪ್ರಾಯವನ್ನು ಸರ್ಕಾರಕ್ಕೆ ತಿಳಿಸಲಾಗಿದೆ. ಅದರ ಬದಲಿಗೆ ಧಾನ್ಯವನ್ನು ಆಯೋಗವೇ ನೇರವಾಗಿ ಖರೀದಿಸಿ ಅಂಗನವಾಡಿಗೆ ಪೂರೈಕೆ, ಹಾಪ್‌ಕಾಮ್, ನಂದಿನಿ ಮಳಿಗೆಗಳಲ್ಲಿ ಮಾರಾಟ ಮಾಡುವ ಬಗ್ಗೆ ಚಿಂತನೆ ನಡೆಸಬಹುದೆಂಬ ಸಲಹೆ ನೀಡಿದ್ದೇವೆ.

| ಡಾ.ಟಿ.ಎನ್.ಪ್ರಕಾಶ ಕಮ್ಮರಡಿ ಅಧ್ಯಕ್ಷ, ರಾಜ್ಯ ಕೃಷಿ ಬೆಲೆ ಆಯೋಗ

### ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಘಟಕಗಳ ರಾಜ್ಯಮಟ್ಟದ ಕಾರ್ಯಾಗಾರ

# ‘13 ಬೆಳೆಗಳ ಬೆಂಬಲ ಬೆಲೆಗೆ ಶಿಫಾರಸು’

ಪ್ರಜಾವಾಣಿ ವಾರ್ತೆ

ರಾಯಚೂರು: ರೈತರ ಬೆಳೆಯುವ ಪ್ರಮುಖವಾದ 13 ಬೆಳೆಗಳಿಗೆ ಬೆಂಬಲ ಬೆಲೆಯನ್ನು ನೀಡಬೇಕು ಎಂದು ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್ ಪ್ರಕಾಶ ಕಮ್ಮರಡಿ ಹೇಳಿದರು.

ನಗರದ ಕೃಷಿ ವಿಶ್ವವಿದ್ಯಾಲಯದ ವಿಚಾರ ಸಂಕೀರ್ಣ ಕೊಠಡಿಯಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ಕೃಷಿ ಬೆಲೆ ಆಯೋಗದ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಘಟಕಗಳ ರಾಜ್ಯಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಕೃಷಿ ಬೆಲೆ ಸಂಬಂಧಿಸಿದಂತೆ ಆಯೋಗದಿಂದ ಸರ್ಕಾರಕ್ಕೆ ಬೃಹತ್ ವರದಿಯನ್ನು ನೀಡಲಾಗಿತ್ತು, ಅದರಲ್ಲಿ ರಾಜ್ಯ ಸಮ್ಮಿಶ್ರ ಸರ್ಕಾರವು ಐದು ಪ್ರಮುಖ ಅಂಶಗಳನ್ನು ಅನುಷ್ಠಾನಕ್ಕೆ ಕ್ರಮಕೈಗೊಂಡಿದೆ. ಸಮ್ಮಿಶ್ರ ಸರ್ಕಾರವು ರೈತರ ಪರವಾಗಿದೆ. ರಾಜ್ಯದಲ್ಲಿ ಭತ್ತ ಬೇಸಾಯಗಾರರು ಮಳೆ ಕೊರತೆಯಿಂದ ಕೈಕಟ್ಟಿ ಕುಳಿತಿದ್ದಾರೆ. ಇವರಿಗೆ ನ್ಯಾಯ ಒದಗಿಸಿಕೊಡಬೇಕು ಎಂದರು.

**ಮುಖ್ಯಾಂಶಗಳು**

- ಬೆಲೆ ಆಯೋಗದಿಂದ ವರದಿ ಸಿದ್ಧ
- ವಿವಿಧೆಡೆಯಿಂದ ರೈತರು ಭಾಗಿ
- ರೈತರ ನಷ್ಟ ತಪ್ಪಿಸಲು ಯೋಜನೆ

**ರೈತರು ಸಮಗ್ರ ಕೃಷಿ ಪದ್ಧತಿಯನ್ನು ಅನುಸರಿಸಬೇಕು. ಕೃಷಿಯೊಂದಿಗೆ ಜಾನುವಾರುಗಳನ್ನು ಸಾಕಾಣಿಕೆ ಮಾಡಿಕೊಳ್ಳುವುದರಿಂದ ನಷ್ಟ ಇರುವುದಿಲ್ಲ. ಡಾ. ಕೆ.ಎನ್. ಕಟ್ಟಿಮನಿ ರಾಯಚೂರು ಕೃಷಿ ವಿವಿ ಕುಲಪತಿ**

ರೈತರ ಹಿತ ಕಾಪಾಡುವುದೇ ಕೃಷಿ ಬೆಲೆ ಆಯೋಗದ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.

ಕಾರ್ಯಾಗಾರದ ಅಧ್ಯಕ್ಷತೆ ವಹಿಸಿದ್ದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಕೆ.ಎನ್ ಕಟ್ಟಿಮನಿ ಮಾತನಾಡಿ, ರೈತರು ದೇಶದ ಬೆನ್ನೆಲುಬಾಗಿದ್ದಾರೆ. ರೈತರು ಜಾಣರಾಗಿ ಒಂದೇ ಬೆಳೆಯನ್ನು ಬೆಳೆಯದೇ ವಿವಿಧ ರೀತಿಯ ಬೆಳೆಗಳನ್ನು ಬೆಳೆಯಬೇಕು. ರೈತರು ಜಾಣರಾದರೇ ಇಡೀ ದೇಶವನ್ನೇ ಆಳುತ್ತಾರೆ. ಕೃಷಿ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಿದರೆ ರೈತ ಉದ್ಧಾರವಾಗುತ್ತಾನೆ ಎಂದು ಹೇಳಿದರು.



ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಶನಿವಾರ ಏರ್ಪಡಿಸಿದ್ದ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಘಟಕಗಳ ರಾಜ್ಯಮಟ್ಟದ ಕಾರ್ಯಾಗಾರವನ್ನು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್ ಪ್ರಕಾಶ ಕಮ್ಮರಡಿ ಉದ್ಘಾಟಿಸಿ ಮಾತನಾಡಿದರು

ಮುಖ್ಯ ಬೆಳೆಗಳ ವಸ್ತುಸ್ಥಿತಿ ವಿಶ್ಲೇಷಣೆಯ ಕರಪತ್ರಗಳನ್ನು ಕೃಷಿ ವಿಶ್ವವಿದ್ಯಾಲಯ ಕುಲಪತಿ ಡಾ.ಕೆ.ಎನ್‌ಕಟ್ಟಿಮನಿ ಇವರು ಬಿಡುಗಡೆಗೊಳಿಸಿದರು. ಜಂಟಿ ಕೃಷಿ ಇಲಾಖೆ ನಿರ್ದೇಶಕ ಡಾ.ಚೇತನ ಪಾಟೀಲ್, ಕೃಷಿ ಅಧಿಕಾರಿಗಳಾದ ಡಾ.ಡಿ.ಎಮ್.ಚಂದರಗಿ, ಡಾ.ಬಿ.ಕೆ ದೇಸಾಯಿ, ಡಾ. ಬಿ.ಎಂ ಚಿತ್ತಾಪೂರ ಇದ್ದರು.